ಫೈನಲ್‌ನಲ್ಲಿ ಫ್ರಾನ್ಸ್ ಎದುರು ಕೈಚೆಲ್ಲಿತು. ಆದರೆ ತನ್ನ ಹೋರಾಟದ ದೆಸೆಯಿಂದಾಗಿಯೇ ಕ್ರೀಡಾಪ್ರೇಮಿಗಳ ಆಕರ್ಷಣೆಯ ಕೇಂದ್ರಬಿಂದುವಾಗಿತ್ತು. ಫೈನಲ್ ಪಂದ್ಯದಲ್ಲಿ ಸೋತು, ಸುದ್ದಿಗೋಷ್ಠಿಗೆ ಬಂದ ಕ್ರೊವೇಷ್ಯಾ ತಂಡದ ಕೋಚ್ ಲಾಟ್ಕೊ ಡಾಲಿಕ್ 'ಉಳಿದ ದೇಶಗಳಿಗೆ ನಿಮ್ಮ ಸಂದೇಶ ಏನು?' ಎಂಬ ಪ್ರಶ್ನೆಗೆ ಉತ್ತರಿಸಿದ್ದು– ಅದು ನಮ್ಮ ಬಸ್ ಮೇಲೆಯೇ ಬರೆದಿದೆ ಎಂದು! 'ಪುಟ್ಟ ದೇಶ, ದೊಡ್ಡ ಕನಸುಗಳು' ಎಂಬುದೇ ಬಸ್ ಮೇಲಿದ್ದ ಘೋಷಣೆ.

## ಮಾಧ್ಯಮಲೋಕದ ಕಣ್ಮಣಿ

ಗೂಗಲ್ ನೆರವಿನಿಂದ ನಡೆಸುವ ಹುಡುಕಾಟದಲ್ಲಿ ಸಾಮಾನ್ಯವಾಗಿ ಪದವೊಂದರ ಜನಪ್ರಿಯತೆಯನ್ನು 1ರಿಂದ 100ರವರೆಗೆ ರ‍್ಯಾಂಕಿಂಗ್ ಆಧಾರದ ಮೇಲೆ ಅಳೆಯಲಾಗುತ್ತದೆ (ಈ ರ‍್ಯಾಂಕಿಂಗ್ 100 ತಲುಪಿದರೆ ಅಗ್ರಸ್ಥಾನ; 50 ಮುಟ್ಟಿದರೆ ಅರ್ಧಸ್ಥಾನ). 2014ರ ಫಿಫಾ ಸ್ಪರ್ಧೆಯ ವೇಳೆ ಕ್ರೊವೇಷ್ಯಾದ ಸ್ಕೋರ್ 28 ಆಗಿದ್ದರೆ, 2018ರಲ್ಲಿ ಅದು 100 ತಲುಪಿದೆ! ಸೆಮಿಫೈನಲ್‌ನ ಒಂದು ತಾಸಿನ ಅವಧಿಯಲ್ಲಿ ಕ್ರೊವೇಷ್ಯಾ ಪದವನ್ನು ಉಲ್ಲೇಖಿಸಿ ಮೂರೂವರೆ ಲಕ್ಷ ಟ್ವೀಟ್‌ಗಳನ್ನು ಮಾಡಲಾಗಿದ್ದು, ಇದು ದಿನನಿತ್ಯದ ಸರಾಸರಿ ಟ್ವೀಟ್‌ಗಳ 80 ಪಟ್ಟು ಆಗಿತ್ತು. ಫ್ರಾನ್ಸ್ ಜತೆ ಸೆಣಸಾಟ ನಡೆಸುತ್ತಿದ್ದ ಫೈನಲ್ ಪಂದ್ಯದ ಸಂದರ್ಭದಲ್ಲಿ ಹತ್ತು ಲಕ್ಷ ಟ್ವೀಟ್‌ಗಳನ್ನು 'ಕ್ರೊಯೇಷ್ಯಾ ಪದ ಉಲ್ಲೇಖಿಸಿ ಮಾಡಲಾಗಿತ್ತು.

ಯಾವುದೇ ದೇಶ ಸಮೂಹ ಮಾಧ್ಯಮದಲ್ಲಿ ಈ ತೆರನಾದ 'ಪ್ರಖ್ಯಾತಿ ಪಡೆಯಲು ಕೋಟಿಗಟ್ಟಲೇ ಹಣ ಖರ್ಚು ಮಾಡಬೇಕಾಗುತ್ತದೆ. ಆದರೆ ಕ್ರೊವೇಷ್ಯಾ ಅದೇನನ್ನೂ ಮಾಡದೇ ಒಂದಷ್ಟು ದಿನಗಳ ಕಾಲ ಸಾಮಾಜಿಕ ಮಾಧ್ಯಮದಲ್ಲಿ ಚಕ್ರವರ್ತಿಯಂತೆ ಮೆರೆದಾಡಿದೆ. ಇನ್ನು ಟೆಲಿವಿಷನ್, ಪತ್ರಿಕೆಗಳು, ವೆಬ್ ಮ್ಯಾಗಜಿನ್‌ಗಳು ಹಾಗೂ ಬ್ಲಾಗ್‌ಗಳಲ್ಲಿ ಈ ದೇಶದ ವೈಶಿಷ್ಟ್ಯ, ಇಲ್ಲಿಂದ ಪ್ರಕಟವಾದ ಫುಟ್‌ಬಾಲ್ ತಂಡದ ಸಾಹಸಗಾಥೆಗಳು ಪುಂಖಾನುಪುಂಖವಾಗಿ ಮೂಡಿಬಂದಿವೆ.

ಯೂರೋಪಿನ ಇತರ ದೇಶಗಳಿಗೆ ಹೋಲಿಸಿದರೆ ಕ್ರೊವೇಷ್ಯಾ ಆರ್ಥಿಕ ಸದೃಢತೆಯಲ್ಲಾಗಲೀ, ಕ್ರೀಡೆಗಳಿಗೆ ಮಾಡುವ ವೆಚ್ಚಕ್ಕಾಗಲೀ ಸರಿಸಮನಾಗಿ ನಿಲ್ಲಲಾರದು. ಘಟಾನುಘಟಿಗಳನ್ನು ಪರಾಭವಗೊಳಿಸಿ ಇಂಥ ಅಚ್ಚರಿಯ ಫಲಿತಾಂಶವನ್ನು ನೀಡುವುದರ ಹಿಂದೆ ಅದೃಷ್ಟ ಒಂದೇ ಲೆಕ್ಕಕ್ಕೆ ಬರುತ್ತದೆಯೇ?

ಈ ಬಗ್ಗೆ ಸಾಕಷ್ಟು ಚರ್ಚೆಗಳು ನಡೆಯುತ್ತಿವೆ. ಐಸ್‌ಲ್ಯಾಂಡ್, ವೇಲ್ಸ್‌ನಂಥ ದೇಶಗಳು ಈ ತೆರನಾದ ಅಚ್ಚರಿಗಳನ್ನು ಈ ಹಿಂದೆ ಕೊಟ್ಟಿವೆ. ಈಗ ಕ್ರೊವೇಷ್ಯಾದ ಸರದಿ. ಅದರಲ್ಲೂ ಭಾರತ ಅರ್ಹತಾ ಸುತ್ತಿನಲ್ಲೇ ಸೋತಾಗ ಇಂಥ ಪ್ರಶ್ನೆಗಳು ಮತ್ತೆ ಮತ್ತೆ ಉದ್ಭವವಾಗುತ್ತವೆ. ಕ್ರೀಡಾ ಪಂಡಿತರ ಪ್ರಕಾರ, ಇಂಥ ಸಾಧನೆಗಳು ರಾತ್ರಿ ಬೆಳಗಾಗುತ್ತಲೇ ನಡೆಯಲಾರವು. ಈಚೆಗೆ ನಡೆದ ಫಿಫಾ ಟೂರ್ನಿಯಲ್ಲಿ ಪಾಲ್ಗೊಂಡಿದ್ದ 32 ದೇಶಗಳ ಪೈಕಿ ಹತ್ತು ದೇಶಗಳ ಜನಸಂಖ್ಯೆ ತಲಾವಾರು ಅರ್ಧ ಕೋಟಿಗಿಂತ ಕಡಿಮೆ! ಈ ಹಿಂದಿನ ಫಿಫಾ ಟೂರ್ನಿಗಳಲ್ಲಿ ಕಪ್ ತಮ್ಮದಾಗಿಸಿಕೊಂಡ ಉರುಗ್ವೆ ಜನಸಂಖ್ಯೆ 36 ಲಕ್ಷ ಆಗಿದ್ದರೆ, ಅರ್ಜೆಂಟೈನಾದ್ದು ನಾಲ್ಕೂವರೆ ಕೋಟಿ. ಕರಾರುವಾಕ್ಕಾಗಿ ಯೋಜನೆ ಸಿದ್ಧಪಡಿಸಿ, ಅಪ್ರತಿಮ ಸಾಮರ್ಥ್ಯ ಹಾಗೂ ಚಾಣಾಕ್ಷ ಆಟಗಾರರ ಪಡೆ ರೂಪಿಸುವುದರ ಹೊರತಾಗಿ ಎಷ್ಟೇ ಜನಸಂಖ್ಯೆ ಇದ್ದರೂ ಸಾಧನೆ ಮಾಡುವುದು ಅಸಾಧ್ಯವೇ ಸೈ ಎನ್ನುತ್ತಾರೆ ಕ್ರೀಡಾ ತಜ್ಞರು.

## ಕ್ರೊವೇಷ್ಯಾದಲ್ಲಿ..

**ಅತ್ಯಂತ ಸಣ್ಣ ಪಟ್ಟಣ:** ದೇಶದ ವಾಯುವ್ಯಕ್ಕೆ ಇರುವ ಹಮ್, ಜಗತ್ತಿನಲ್ಲೇ ಅತ್ಯಂತ ಸಣ್ಣ ಪಟ್ಟಣ ಎಂಬ ಖ್ಯಾತಿ ಪಡೆದಿದೆ.
**ವೃತ್ತಾಕಾರದ ಕ್ರೀಡಾಂಗಣ:** ರೋಮನ್ನರ ಕಾಲದಲ್ಲಿ ನಡೆಯುತ್ತಿದ್ದ ಕಾಳಗಗಳಿಗಾಗಿ ಪುಲಾ ನಗರದ ಬಳಿ ಇರುವ ವೃತ್ತಾಕಾರದ ಕ್ರೀಡಾಂಗಣ ಈಗಲೂ ಆ ಕರಾಳ ದಿನಗಳ ನೆನಪನ್ನು ಹೇಳುತ್ತಿದೆ.
**ವೈನ್:** ತಿಂಡಿ– ತಿನಿಸುಗಳ ಜತೆ ವೈನ್‌ಗೆ ಕ್ರೋವೇಷ್ಯಾ ಪ್ರಸಿದ್ಧಿ. ಸಾವಿರಾರು ವರ್ಷಗಳ ಹಿಂದೆಯೇ ಗ್ರೀಕರಿಂದ ಕಲಿತ ಕೌಶಲವಿದಂತೆ.
**ನಿಸರ್ಗ ತಾಣಗಳು:** ಎಂಟು ರಾಷ್ಟ್ರೀಯ ಉದ್ಯಾನಗಳೂ ಸೇರಿದಂತೆ ದೇಶದ ಶೇಕಡ 10ರಷ್ಟು ಭಾಗವನ್ನು ಸುಂದರ ಪರಿಸರದ ತಾಣಗಳಿಗೆ ಮೀಸಲಿಡಲಾಗಿದೆ.
**ಸೂರ್ಯಾಸ್ತ:** ಜಗತ್ತಿನಲ್ಲೇ ಅತ್ಯಂತ ಮನೋಹರವಾದ ಸೂರ್ಯಾಸ್ತದ ದೃಶ್ಯ ಝುದರ್ ಪಟ್ಟಣದ ಸಮೀಪ ಕಾಣುತ್ತದೆ.
**ನದಿಗಳು:** ಪುಟ್ಟ ದೇಶದುದ್ದಕ್ಕೂ ಹರಿಯುವ ನದಿಗಳ ಸಂಖ್ಯೆ– 26. ಪರಿಸರ ತಾಣಗಳು ಹಾಗೂ ಜಲಪಾತಗಳ ಸೃಷ್ಟಿಗೆ ಇವೇ ಮೂಲಕಾರಣ.




## ಅಧ್ಯಕ್ಷೆಯ ಫುಟ್‌ಬಾಲ್ ಪ್ರೀತಿ

ತಮ್ಮ ದೇಶದ ಪರವಾಗಿ ಫೀಫಾದಲ್ಲಿ ಆಡಲು ಬಂದ ತಂಡಕ್ಕೆ ಕ್ರೊವೇಷ್ಯಾದ ಅಧ್ಯಕ್ಷೆ ಕೊಲಿಂಡಾ ಗ್ರಾಬರ್ ಕಿಟರೊವಿಚ್ ನೀಡಿದ ಪ್ರೋತ್ಸಾಹ ಎಲ್ಲರ ಗಮನ ಸೆಳೆದಿದೆ. ಕ್ರೊವೇಷ್ಯಾ ಫುಟ್‌ಬಾಲ್ ತಂಡದ ಆಟಗಾರರಿಗಿಂತ ಆ ದೇಶದ ಅಧ್ಯಕ್ಷೆ ಕೊಲಿಂಡಾ ಅವರೇ ಸೆಲೆಬ್ರಿಟಿಯಂತೆ ಮೆರೆದದ್ದು ಮತ್ತೊಂದು ವೈಶಿಷ್ಟ್ಯ.

ಕ್ರೀಡೆಗಳಿಗೆ ಪ್ರೋತ್ಸಾಹ ಕೊಡುವುದರಲ್ಲಿ ಕೊಲಿಂಡಾ ಯಾವತ್ತೂ ಹಿಂದೆ ಬಿದ್ದಿಲ್ಲ. 'ಪ್ರೊಟೊಕಾಲ್' ಮೀರಿ ಅವರು ತೋರಿದ ಸಂಭ್ರಮದ ವರ್ತನೆ ಜನರ ಗಮನ ಸೆಳೆಯಿತು. ಬಿಳಿ– ಕೆಂಪು ಚೌಕಳಿಯ ಉಡುಪು ಧರಿಸಿದ್ದ ಅವರು, ಕ್ರೊವೇಷ್ಯಾ ಆಡಿದ ಪ್ರತಿ ಪಂದ್ಯಕ್ಕೂ ಸಾಕ್ಷಿಯಾದರು. ನ್ಯಾಟೊ ಶೃಂಗಸಭೆಯಲ್ಲಿ ಪಾಲ್ಗೊಳ್ಳಬೇಕಿದ್ದರಿಂದ ಸೆಮಿಫೈನಲ್‌ಗೆ ಬಂದಿರಲಿಲ್ಲ. ಪ್ರತಿ ಆಟಗಾರನ ಅಪ್ಪಿ ಅಭಿನಂದಿಸುವ ದೃಶ್ಯಗಳು ವೈರಲ್ ಆದವು. (ಅದಕ್ಕಿಂತ ಹೆಚ್ಚಾಗಿ, ಕೆಲವು ದಿನಗಳ ಹಿಂದಷ್ಟೇ ಕೊಲಿಂಡಾ ಬಿಕಿನಿಯಲ್ಲಿದ್ದ ಒಂದಷ್ಟು ಫೋಟೊಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದವು. ಅವು ನಕಲಿ ಎಂಬುದು ಆಮೇಲೆ ಗೊತ್ತಾಯಿತು.) ಫೈನಲ್ ಪಂದ್ಯದಲ್ಲಿ ಕ್ರೊವೇಷ್ಯಾ ಸೋತ ಬಳಿಕ ಬಹುಮಾನ ವಿತರಣೆ ಸಮಾರಂಭದಲ್ಲಿ ಕೊಲಿಂಡಾ, ಫ್ರಾನ್ಸ್ ಅಧ್ಯಕ್ಷ ಇಮಾನ್ಯುವೆಲ್ ಮಕ್ರಾನ್ ಜತೆ ನಿಂತು ಚಪ್ಪಾಳೆ ತಟ್ಟಿ ವಿಜೇತ ತಂಡವನ್ನು ಅಭಿನಂದಿಸಿದರು. ಅದರಲ್ಲೂ ಸುರಿಯುತ್ತಿರುವ ಮಳೆಯ ಮಧ್ಯೆಯೇ ಪ್ರತಿ ಆಟಗಾರರನ್ನು ಖುದ್ದಾಗಿ ಅಭಿನಂದಿಸುವ ದೃಶ್ಯಗಳು ಮೆಚ್ಚುಗೆ ಗಳಿಸಿದವು.

ಅಂದ ಹಾಗೆ, ಅಧ್ಯಕ್ಷೆ ಕೊಲಿಂಡಾ ರಷ್ಯಾಕ್ಕೆ ಬಂದಿದ್ದು ವಿಮಾನದ ಇಕಾನಮಿ ದರ್ಜೆ ಸೀಟಿನಲ್ಲಿ ಕುಳಿತು; ಅದೂ ತಮ್ಮ ಸ್ವಂತ ಖರ್ಚಿನಲ್ಲೇ! ತಮ್ಮ ದೇಶದ ಆಟಗಾರರನ್ನು ಹುರಿದುಂಬಿಸಲು ಅವರು ರಷ್ಯಾಕ್ಕೆ ಬಂದಾಗಲೆಲ್ಲ ತಮ್ಮ ಹಣವನ್ನೇ ಖರ್ಚು ಮಾಡಿದ್ದಾರೆ.

ಯುಗೊಸ್ಲಾವಿಯಾದ ಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿದ ಕೊಲಿಂಡಾ, ಇಂಗ್ಲಿಷ್, ಸ್ಪ್ಯಾನಿಷ್ ಸಾಹಿತ್ಯ ಪದವೀಧರೆ. ಐರೋಪ್ಯ ವ್ಯವಹಾರಗಳು, ವಿದೇಶಾಂಗ ಸಚಿವೆಯಾಗಿ ಕಾರ್ಯನಿರ್ವಹಿಸಿದ ಅವರಿಗೆ ಅಮೆರಿಕದಲ್ಲಿ ಕ್ರೊವೇಷ್ಯಾ ರಾಯಭಾರಿಯಾಗಿ ಕರ್ತವ್ಯ ನಿರ್ವಹಿಸಿದ ಅನುಭವವಿದೆ. 2015ರಿಂದ ಕ್ರೊವೇಷ್ಯಾದ ನಾಲ್ಕನೇ ಅಧ್ಯಕ್ಷೆಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.